ಗಣಕೀಕೃತ

# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2584
ಸದಸ್ಯರ ಹೆಸರು : ಡಾ. ಚಂದ್ರಶೇಖರ್ ಬಿ. ಪಾಟೀಲ್ (ಪದವೀಧರರ ಕ್ಷೇತ್ರ)
ಉತ್ತರಿಸುವ ದಿನಾಂಕ : 24.03.2022
ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆ ಕಾರಂಜಾ ಒಳ ಹರಿವು ಹೆಚ್ಚಾದಾಗ ಬಹಳಷ್ಟು ರೈತರು ಸಾಕಷ್ಟು ಪ್ರಮಾಣದಲ್ಲಿ ಭೂಮಿ, ಬೆಳೆ ಜಾನುವಾರುಗಳನ್ನು ಕಳೆದುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕಾರಂಜಾ ಅಣೆಕಟ್ಟಿನ ಹಿನ್ನೀರಿನಿಂದ 16,058 ಎಕರೆ 05 ಗುಂಟೆ ರೈತರ ಜಮೀನು ಮುಳುಗಡೆ ಆಗಿರುತ್ತದೆ. ಇದರಲ್ಲಿ ಈಗಾಗಲೇ 15,522 ಎಕರೆ 25 ಗುಂಟೆ ಜಮೀನಿಗೆ ಆಯಾ ಸಾಲಿನ ಮಾರುಕಟ್ಟೆ ದರದನ್ವಯ 2018-19 ನೇ ಸಾಲಿನವರೆಗೆ ರೂ. 103.238 ಕೋಟಿ ಮೊತ್ತದ ಭೂ-ಪರಿಹಾರವನ್ನು ವಿಶೇಷ ಭೂಸ್ವಾಧೀನಾಧಿಕಾರಿಗಳು, ಕಾರಂಜಾ ಯೋಜನೆ, ಬೀದರ್ ರವರ ಐತೀರ್ಪಿನಂತೆ ಭೂಪರಿಹಾರವನ್ನು ನೀಡಲಾಗಿದೆ.<br><br>ಬಾಕಿಯಿರುವ 535 ಎಕರೆ 20 ಗುಂಟೆ ಜಮೀನಿಗಾಗಿ ಭೂಸ್ವಾಧೀನ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.<br><br>ಕಾರಂಜಾ ಡ್ಯಾಂ ಗರಿಷ್ಠ ಮಟ್ಟಕ್ಕೆ ನೀರು ಸಂಗ್ರಹಿಸಲಾಗುತ್ತಿದ್ದು, ಈ ಹಿನ್ನೀರಿನಿಂದ ರೈತರ ಹೊಲಗದ್ದೆಗಳಲ್ಲಿ ಭೂಸ್ವಾಧೀನ ಮಾಡಿಕೊಂಡಿರುವ ಜಮೀನಿಗಿಂತ ಅಧಿಕ ಜಮೀನು ಬಾಧಿತವಾಗುವ ಕ್ಷೇತ್ರವನ್ನು ನಿಖರವಾಗಿ ತಿಳಿಯಲು ಡ್ರೋಣ್ ಸರ್ವೆ ಮಾಡಿಸಲಾಗುತ್ತಿದೆ. ಡ್ರೋಣ್ ಸರ್ವೆ ಸಮೀಕ್ಷೆಯ ಅಂತಿಮ ವರದಿ ಬಂದ ನಂತರ ವಾಸ್ತವಿಕವಾಗಿ ಹಿನ್ನೀರಿನಿಂದ ಹಾನಿಯಾಗುವುದು ತಿಳಿದು ಬಂದಲ್ಲಿ ಇನ್ನೂ ಭೂಸ್ವಾಧೀನವಾಗದೇ ಇರುವಂತಹ ಹೆಚ್ಚುವರಿ ಭೂಸ್ವಾಧೀನ ಪ್ರಕ್ರಿಯೆ ಹಾಗೂ ಪರಿಹಾರದ ಕುರಿತು ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲು ಉದ್ದೇಶಿಸಲಾಗಿದೆ. |
| ಆ) | ಬಂದಿದ್ದಲ್ಲಿ, ಸರ್ಕಾರ ಇಲ್ಲಿಯವರೆಗೆ ರೈತರಿಗೆ ನೀಡಲಾದ ಪರಿಹಾರ ಧನವೆಷ್ಟು? (ವಿವರ ಒದಗಿಸುವುದು) | |

ಜಸಂಇ 112 ಎಂಎಲ್‌ಎ 2022

(ಗೋವಿಂದ ಎಂ. ಕಾರಜೋಳ)
ಜಲಸಂಪನ್ಮೂಲ ಸಚಿವರು